ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 248/2020

(ಫ್ರಾಸಾ-3 ಚಾಸಾ-3)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 17.03.2025

| | | |
|---|---|---|
| ಸಾಕ್ಷಿದಾರರ ಹೆಸರು | - | ಸಂಪತ್ ಕುಮಾರ್ |
| ತಂದೆಯ ಹೆಸರು | - | ಮುನಿರಾಜು |
| ವಯಸ್ಸು | - | 35 ವರ್ಷ, |
| ಉದ್ಯೋಗ | - | ಖಾಸಗಿ ಕೆಲಸ |
| ವಾಸ | - | ಬಿಸುವನಹಳ್ಳಿ, ದೊಡ್ಡಬಳ್ಳಾಪುರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ಮತ್ತು 2 ಗೊತ್ತು. ಚಾಸಾ-4 ರಿಂದ 7 ಗೊತ್ತು. ಚಾಸಾ-1 ಮತ್ತು 2 ಪರಿಶಿಷ್ಟ ಜಾತಿಗೆ ಸೇರಿದವರು. ಆರೋಪಿತರು ಗೊತ್ತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರು ಒಕ್ಕಲಿಗ ಜಾತಿಗೆ ಸೇರಿದವರು.

2. ದಿಃ01.05.2020 ರಂದು ಮಧ್ಯಾಹ್ನ ಸುಮಾರು 03.00-04.00 ಘಂಟೆ ಸಮಯದಲ್ಲಿ ಚಾಸಾ-2 ಇವರ ಜಮೀನಿನಲ್ಲಿ 1 ಹಾಗೂ 2 ನೇ ಆರೋಪಿತರು ಹಾಗೂ ಅವರ ಮಕ್ಕಳಾದ ಗಿರೀಶ್ ಮತ್ತು ನವೀನ್ ಹಾಗೂ ಚಾಸಾ-1 ಮತ್ತು 2 ಇದ್ದರು. ನಮ್ಮ ಮನೆ ಸದರಿ ಜಮೀನಿನ ಪಕ್ಕದಲ್ಲಿ ಇರುತ್ತದೆ. ಸದರಿ ಜಮೀನಿನಲ್ಲಿ ಚಾಸಾ-1 ಮತ್ತು 2 ಹಾಗೂ 1 ಮತ್ತು 2 ನೇ ಆರೋಪಿತರ ನಡುವೆ ದುಡ್ಡಿನ ವಿಚಾರವಾಗಿ ಗಲಾಟೆ ನಡೆಯುತ್ತಿತ್ತು. ಚಾಸಾ-2 ಇವರು ಆರೋಪಿ ನಾಗರಾಜ್ ಗೆ ಹಣ ಕೊಡಬೇಕಾಗಿದ್ದ ವಿಚಾರವಾಗಿ ಗಲಾಟೆ ನಡೆಯುತ್ತಿತ್ತು.

3. 2 ನೇ ಆರೋಪಿಯು ಚಾಸಾ-2 ಇವರಿಗೆ ಇಟ್ಟಿಗೆಯಲ್ಲಿ ತಲೆಗೆ ಹೊಡೆದರು ಹಾಗೂ ಅವಾಚ್ಯ ಶಬ್ದಗಳಿಂದ ನಿಂದಿಸಿದರು ಹಾಗೂ ಮಾದಿಗರು, ದುಡ್ಡು ಕೊಡಲು ಯೋಗ್ಯತೆ ಇಲ್ಲ, ಮನೆಯ ಹತ್ತಿರ ಬಂದು ಜೀತ ಇರಿ ದುಡ್ಡು ಕೊಡಲು ಆಗದೇ ಇದ್ದರೆ, ಎಂದು ಹೇಳಿ ಜಾತಿ ನಿಂದನೆ ಮಾಡಿದರು.

4. 1 ಮತ್ತು 2 ನೇ ಆರೋಪಿತರು ಹಾಗೂ ಅವರ ಇಬ್ಬರು ಮಕ್ಕಳು, ಚಾಸಾ-1 ಇವರ ಬಟ್ಟೆ ಹರಿದು ಕೆಟ್ಟ ಮಾತುಗಳಿಂದ ಬೈದರು.

5. ನಾನು, ಚಾಸಾ-4 ಮತ್ತು 5 ಜಗಳವನ್ನು ಬಿಡಿಸಿದೆವು. ಆರೋಪಿತರಿಬ್ಬರು ಆಗ ತಮ್ಮ ಮನೆಯ ಕಡೆಗೆ ಓಡಿ ಹೋದರು. ಚಾಸಾ-2 ಇವರಿಗೆ ರಕ್ತ ಬರುತ್ತಿದ್ದು ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ಅವರನ್ನು ಚಿಕಿತ್ಸೆಗಾಗಿ ಸಾಗಿಸಲಾಯಿತು.

(ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಮುಂದಿರುವ ಸೀಲ್ ಮಾಡಿದ ವಸ್ತುವನ್ನು ತೆರೆಯಲು ಅನುಮತಿ ಕೋರಿದ್ದು ಅದು ಸೀಲ್ ಆಗಿದ್ದು ತೆರೆಯಲು ಅನುಮತಿ ನೀಡಲಾಯಿತು)

ಈಗ ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಇಟ್ಟಿಗೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಇಟ್ಟಿಗೆಯನ್ನು ಮು.ಮಾ-1 ಎಂದು ಗುರ್ತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು)

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಢೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು